Doc-561
T-P-2

Reg No B G 155 17 — 10 — 72

In The State **First Golden Jubilee Celebrated Paper 'Satyavadi' daily, Mysore 4**

56 th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸುವರ್ಣ ಮಹೋತ್ಸವ ಸಂದರ್ಶಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಶಾಸಕರ ಅಭಿಪ್ರಾಯದಂತೆ ಭೂಮಿತಿ ನಿಗದಿ

ಮತ ಸ್ವಾತಂತ್ರ್ಯ

★

ಗುಜರಾತು ಮತಾಂತರ ವಿರುದ್ಧ ಮಸೂದೆಯು, ಒತ್ತಾಯದಿಂದ, ಆಶೆತೋರಿಸಿ, ಪುಸಲಾಯಿಸಿ ಮತಾಂತರಗೊಳಿಸುವದನ್ನು ತಪ್ಪಿಸಲು ಅಧಿಕಾರಿಗಳಿಗೆ ಅಧಿಕಾರ ಕೊಡುತ್ತದೆ. ಕ್ರೈಸ್ತಿಯನ್ನರು, ಬೌದ್ಧರು, ಮತ್ತೂ ಕೆಲವು ಮತ ಗುಂಪುಗಳು ಇದನ್ನು ವಿರೋಧಿಸುತ್ತಿದ್ದು, ಗುಜರಾತು ಶಾಸನ ಸಭೆಯಲ್ಲಿ ಸೆಲೆಕ್ಟ್ ಕಮಿಟಿಗೆ ಹಾಕಲಾಯಿತು. ಪಾರ್ಸಿಗಳು, ಹಿಂದೂ ಮಠಾಧಿಪತಿಗಳು ಇದಕ್ಕೆ ಪೂರ್ಣ ಬೆಂಬಲ ಕೊಟ್ಟಿದ್ದಾರೆ. ಆಡ್ಡಿಆತಂಕವಿಲ್ಲದ ಮತಾಂತರದಿಂದ ದೇಶದಲ್ಲಿ ಕ್ರೈಸ್ತ ಜನಸಂಖ್ಯೆ 1 24 ಕೋಟಿಗೆ ಹೆಚ್ಚಿದೆಯೆಂದು ಗುಜರಾತು ಹಿಂದೂಧರ್ಮ ನಾಯಕ ಶಂಭು ಮಹಾರಾಜ್ ಹೇಳಿರುವರು.

ಗುಜರಾತು ಕ್ರೈಸ್ತ ಸಂಘವು ರಾಜ್ಯದ ಕ್ರೈಸ್ತರಿಗೆ ಶಾಸನಭಂಗ ಚಳವಳಿ ಹೂಡಲು, ಅಹಮದಾಬಾದಿನಲ್ಲಿ ಲೋಕಸಭೆ ಉಪ ಚುನಾವಣೆಯು ಬಹಿಷ್ಕರಿಸಲು ಕರೆ ಇತ್ತಿದೆ. ಅಲ್ಪಸಂಖ್ಯಾ ಕೋಮಿನವರು ಸಾಮೂಹಿಕ ಮತ ಸಂಘ ಸ್ಥಾಪಿಸಿಕೊಂಡು, ಯಾವ ಚುನಾವಣೆಯಲ್ಲೂ ಕಾಂಗ್ರೆಸ್ ಉಮೇದುವಾರರಿಗೆ ಬೆಂಬಲ ನೀಡದಿರಲು ನಿರ್ಧರಿಸಿದೆ.

ಒಂದುಮತದಿಂದ ಇನ್ನೊಂದು ಮತಕ್ಕೆ ಒತ್ತಾಯ ಅಥವಾ ಆಕರ್ಷಣೆಯಿಂದ ಮತಾಂತರಿಸಿದರೆ ತೀವ್ರ ಶಿಕ್ಷೆಗೆ ಗುರಿಯಾಗಬೇಕಾಗುವುದು.

ಗುಜರಾತಿನಲ್ಲಿ ಹಿಂದೂಗಳಿರುವ ಭಾಗಗಳಲ್ಲಿ ಹೆಚ್ಚು ಮತಾಂತರ ನಡೆಯುತ್ತಿದೆಯೆಂದು, ಆದಿವಾಸಿ ಹರಿಜನರು ಪರಿಶಿಷ್ಟ ಜಾತಿನಾಶಕರೊಬ್ಬರು ಕೊಟ್ಟ ದೂರಿಗಾಗಿ ಈ ಮಸೂದೆ ತಯಾರಿಸಲಾಗಿದೆ– ಟ್ರೂತ್

ಅಮೇರಿಕನ್ನರಿಗೆ ವಿನೋಬಾರವರು ಹೇಳಿದ ಮಾತು

ನೀವು ಶಸ್ತ್ರಾಸ್ತ್ರಗಳನ್ನು ಹೆಚ್ಚಿಸುತ್ತೀರಿ ; ಹೆಚ್ಚಿಸಿರಿ ; ಇನ್ನೂ ಹೆಚ್ಚಿಸಿರಿ ; ಅದರಿಂದ ನಿರುದ್ಯೋಗಿಗಳಿಗೆ ಉದ್ಯೋಗವಾದರೂ ಸಿಕ್ಕೀತು. ಆದರೆ ಮುಂದೆ ಕ್ರಿಸ್ತನ ಸಮಾಧಿಯಲ್ಲಿ ಭಗವಾನ್ ಏಸುವಿನ ಹೆಸರಿನಲ್ಲಿ ಈ ಶಸ್ತ್ರಾಸ್ತ್ರಗಳನ್ನೆಲ್ಲಾ ಸಮುದ್ರಕ್ಕೆ ಚಲ್ಲಿಬಿಡಿ.

ಗಮನಾರ್ಹವು

ಟಾಲ್ಸಿ— ರಿಕಾರ್ಡು ಮಾಡಿದ ಧ್ವನಿಯಿಂದಲ್ಲದೆ, ತನ್ನ ಸ್ವಂತ ಧ್ವನಿಯಿಂದಲೇ ಮಾತನಾಡಬಲ್ಲ ಒಂದು ಮಿಷನ್ನನ್ನು ಎಸ್ಟೋನಿಯನ್ ಅಕಾಡಮಿ ಆಫ್ ಸೈನ್ಸ್ ರವರು ತಯಾರಿಸಿರುವರೆಂದು " ಟಾಸ್ " ಪ್ರಕಟಿಸಿದೆ.

★

ಪುನಃ ಹಿಂದೂಮತಕ್ಕೆ

ಹೈದರಾಬಾದು— ಇಂಗಲದಹಾಳ್ ಮತ್ತು ಸುತ್ತಮುತ್ತ ಪ್ರದೇಶದ 500 ಕ್ರಿಶ್ಚಿಯನ್ನರು ಹಿಂದೂಮತಕ್ಕೆ ಪುನರಾಗಮನ ಕಾರ್ಯವನ್ನು ವಿಶ್ವ ಹಿಂದೂ ಪರಿಷತ್ ಏರ್ಪಡಿಸಿತ್ತು.

ನಾಡುಹಬ್ಬ

ಬಿಜಾಪುರ— ನಾಡದೇವಿ ಪ್ರತಿಷ್ಠೆ ಆಡಂಬರದಿಂದ ಮಾಡಲ್ಪಟ್ಟು, ಮುಖ್ಯ ಬೀದಿಗಳಲ್ಲಿ ವೈಭವ ಮೆರವಣಿಗೆ ನಡೆಸಲಾಯಿತು.

★

ದಿವ್ಯವಾಣಿ

ನಮ್ಮ ಹಿತಕ್ಕೆ ಆಗಮವನ್ನು ಇತರರ ವಿಷಯದಲ್ಲಿ ಮಾಡಬಾರದೆನ್ನುವುದೇ ಸರ್ವ ಧರ್ಮದ ಸಾರ. — ವ್ಯಾಸ

ಎಂ ಜಿ ಆರ್ ಪ್ರಕರಣ

ಮದರಾಸು— ಎಂ ಜಿ ರಾಮಚಂದ್ರರು ತಮ್ಮ ಬೆಂಬಲಿಗರು ಮತ್ತು ಅನುಯಾಯಿಗಳನ್ನು ಕುರಿತು, ಡಿಎಂಕೆ ಗೆ ರಾಜಿನಾಮೆ ಕೊಡಬಾರದೆಂದೂ, ಅದರಲ್ಲೇ ಇದ್ದುಕೊಂಡು, ಅಣ್ಣಾದೊರೈ ತೋರಿಸಿದ ವರ್ಗವನ್ನು ತ್ಯಜಿಸಿರುವ ಈಗಿನ ಡಿಎಂಕೆ ನಾಯಕತ್ವದ ಬದಲಾವಣೆ ಹೋರಾಡಬೇಕೆಂದೂ ತಿಳಿಸಿರುವರು : ಚಳವಳಿ ನಿಲ್ಲಿಸಲಿರೆಂದೂ, ತಾವು ಇನ್ನು ಒಂದೆರಡು ದಿನಗಳಲ್ಲಿ ತಮ್ಮ ಮುಂದಿನ ಕ್ರಮ ತಿಳಿಸಲಾಗುವುದೆಂದೂ ಹೇಳಿರುವರು.

○

ಅಗ್ನಿಗೆ ಆಹುತಿ

ಹೈದರಾಬಾದು– ಇಲ್ಲಿ ಒಂದು ವಸ್ತು ಪ್ರದರ್ಶನದಲ್ಲಿ ರೂ. 3 ಲಕ್ಷಕ್ಕೂ ಹೆಚ್ಚು ಮೌಲ್ಯದ ವೈದ್ಯಕೀಯ ಸಲಕರಣೆಗಳು ಬೆಂಕಿ ಪಾಲಾಯಿತು – ಇಂತಹ ಅನಾಹುತ ರಕ್ಷಣೆಗಾಗಿ ಇಡಲಾಗಿದ್ದ ಅಗ್ನಿಶಾಮಕ ಯಂತ್ರ ಯಾಂತ್ರಿಕ ಕುಂದುಕೊರತೆಯಿಂದ ವಿಫಲಗೊಂಡಿತು.

★

ಟಾಂಗಾವಾಲರ ಗೋಳು

ಧಾರವಾಡ— ಬಾಡಿಗೆಗೆ ಆಟೋರಿಕ್ಷಾಗಳ ಓಡಾಟ ಹೆಚ್ಚಾಗಿರುವದನ್ನು ಟಾಂಗಾವಾಲ ಸಂಘ ಪ್ರತಿಭಟಿಸಿ, 100 ಮಂದಿ ಟಾಂಗಾವಾಲರ ಮತ್ತು ಅವರ ಮಕ್ಕಳ ಮೆರವಣಿಗೆ ನಡೆಸಲಾಯಿತು – ನಂತರ ಜಿಲ್ಲಾಧಿಕಾರಿಯವರ ಕಚೇರಿ ಕಾಂಪೌಂಡಿನಲ್ಲಿ ಸತ್ಯಾಗ್ರಹ ನಡೆಯಿತು – ಜಿಲ್ಲಾಧಿಕಾರಿಯರು ಟಾಂಗಾವಾಲರ ಸಮಸ್ಯೆಯನ್ನು ಅವರ ನಾಯಕರೊಡನೆ ಚರ್ಚಿಸಿ, ಅವರ ಕೇಳಿಕೆಯನ್ನು ಸಹಾನುಭೂತಿಯಿಂದ ಪರ್ಯಾಲೋಚಿಸಲಾಗುವುದೆಂದು ತಿಳಿಸಿದರು.

●

ಭೂಪರಿಮಿತಿ

ಮಂಗಳೂರು— ಭೂ ಪರಿಮಿತಿ ಬಗ್ಗೆ ಶಾಸಕರ ಬಹುಸಂಖ್ಯಾ ತೀರ್ಮಾನದಂತೆ ಸರ್ಕಾರ ನಡೆದುಕೊಳ್ಳುವುದೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು ಹೇಳಿದರು.

★

ಇನ್ನೂ ಒಂದು ಫ್ಯಾಕ್ಟರಿ ಅವಶ್ಯ

ಮಂಗಳೂರು— ರಸಾಯನಿಕ ಗೊಬ್ಬರದ ಅಭಾವವಿರುವುದರಿಂದ, ರಾಜ್ಯದಲ್ಲಿ ಮತ್ತೊಂದು ರಸಾಯನಿಕ ಗೊಬ್ಬರದ ಕಾರ್ಖಾನೆಗೆ ಅವಕಾಶವಿರುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ರೂ. 58 ಕೋಟಿಯ ರಸಾಯನಿಕ ಗೊಬ್ಬರ ಪ್ರಾಜೆಕ್ಟಿನ ಶಂಕು ಸ್ಥಾಪನೆ ಮಾಡುತ್ತಾ ಹೇಳಿದರು.

★

ಮತ್ತೂ ರೂ. 6500 ಕ್ರೋಟಿ ತೆರಿಗೆ

ನವದೆಹಲಿ— ಈ ನೇ ಯೋಜನೆಯಲ್ಲಿ ವಿಶೇಷ ನೆರವನ್ನು ಬೇಡಿಕೊಳ್ಳದೆ, ರೂ. 6500 ಕೋಟಿಯಷ್ಟು ತೆರಿಗೆ ವಿಧಿಸಿ, ಮಿತವ್ಯಯ ಮಾರ್ಗ ಅನುಸರಿಸಿ ಪೂರಾಗ ಬೇಕೆಂದು ಪ್ಲಾನಿಂಗ್ ಕಮಿಷನ್ ಯೋಜಿಸಿರುವದೆನ್ನಲಾಗಿದೆ.

○

ಭೂಮಿ ಹಂಚಿಕೆ

ನವದೆಹಲಿ— ವಿವಿಧ ರಾಜ್ಯಗಳಲ್ಲಿ 6.7 ಮಿಲಿಯ ಬಂಜರು ಭೂಮಿ ಹಂಚಲಾಗಿದ್ದು, ಪಡೆದವರಲ್ಲಿ ಭೂಮಿಯಿಲ್ಲದ ವ್ಯವಸಾಯಗಾರರೇ ಹೆಚ್ಚು ಮಂದಿ.

★ ಮೈಸೂರು— ನಾಡಹಬ್ಬ ಸಮಿತಿ ಆಶ್ರಯದಲ್ಲಿ ಮುಂದಿನ ಬೆಳಿಗ್ಗೆ ಶ್ರೀ ಚಾಮುಂಡೇಶ್ವರಿ ದೇವಿಯ ಪ್ರತಿಮೆಯ ದಸರಾ ಮೆರವಣಿಗೆ ನಡೆಯುವುದು.

ಫುಟ್ ಬಾಲ್ ಸಂಘದ ಸದಸ್ಯರು : ಪಶ್ಚಿಮ ಜರ್ಮನಿಯಲ್ಲಿ ಫುಟ್‌ಬಾಲ್ ಸಂಘದ ಸದಸ್ಯರ ಸಂಖ್ಯೆ 3084901 ಕ್ಕೆ ಏರಿದೆ.

ಮೈಸೂರು ದಸರಾ ಚಿತ್ರೋತ್ಸವ
1 9 7 2
ಶಾಲಿಮಾರ್ ಚಿತ್ರಮಂದಿರ

16, 17, 18 ಮತ್ತು 19 ನೇ ಅಕ್ಟೋಬರ್ 1972 ರ ಕಾರ್ಯಕ್ರಮಗಳು

16-10-1972

ಬೆಳಿಗ್ಗೆ 10-30 ಮಲ್ಲೀಶ್ವರ ತೆಲುಗು 1951

ಮಧ್ಯಾಹ್ನ 3-30, ಸಂಜೆ 6-30, ರಾತ್ರಿ 9-30

ದಿ ಬೆಸ್ಟ್ ಏಜ್ ಜಪಾನ್ 1964

17-10-1972

ಬೆಳಿಗ್ಗೆ 10-30, ಸಾರಾ ಆಕಾಶ್ ಹಿಂದಿ

ಮಧ್ಯಾಹ್ನ 3-30, ಸಂಜೆ 6-30, ರಾತ್ರಿ 9-30

ಬ್ರೀಫ್ ಸೀಸನ್ಸ್ ಇಟಲಿ 1970

18-10-1972

ಬೆಳಿಗ್ಗೆ 10-30, ಗುಡ್ಡಿ ಹಿಂದಿ 1971

ಮಧ್ಯಾಹ್ನ 3-30, ಸಂಜೆ 6-30, ರಾತ್ರಿ 9-30

ವಸಂತ ಸೇನ ಕನ್ನಡ

19-10-1972

ಬೆಳಿಗ್ಗೆ 10-30 ವಂಶ ವೃಕ್ಷ ಕನ್ನಡ

ಮಧ್ಯಾಹ್ನ 3-30, ಸಂಜೆ 6-30, ರಾತ್ರಿ 9-30

ಹಣ್ಣೆಲೆ ಚಿಗುರಿದಾಗ ಕನ್ನಡ

ವುಡ್‌ಲಾಂಡ್ 13-10-72 ರಿಂದ ಅಮೋಘ 3 ನೇ ವಾರ

ಹಿಂದಿ ಕ್ಲಬ್ ಅತ್ಯಮೋಘ ಚಿತ್ರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ

ದಿನ 3 ಪ್ರದರ್ಶನಗಳು

ಬೆಳಿಗಿನ ಪ್ರದರ್ಶನ 10 30 ಕ್ಕೆ ಮಧ್ಯಮದುವೆ

Edited Printedand Published by Dharmapracharanirata M S Krishna Rao (Propretor) at the Satyavad Press Chamarajapuram Mysore

ನಂ. ಡಿಎಸ್‌ಆರ್/ಎಡಿವಿಟಿ. 12/72 ಕ್ಯಾಂಪ್ : ಮೈಸೂರು 15 10 1972

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಲನಚಿತ್ರ ಉತ್ಸವಗಳು
1972

ಪ್ರಖ್ಯಾತ ಚಿತ್ರ ಕಲಾವಿದರಾದ

ಜಯ ಭಾದುರಿ, ಅಮಿತಾಬ್ ಬಚನ್
ಮತ್ತು
ಎಂ. ಜಿ. ರಾಮಚಂದ್ರನ್

ಅವರು 20 ನೇ ಅಕ್ಟೋಬರ್ 1972 ರಂದು ಮೈಸೂರು ದಸರಾ ವಸ್ತುಪ್ರದರ್ಶನ ಪ್ರದೇಶದಲ್ಲಿ ಲಕ್ಕಿ-ಡಿಪ್ ಟಿಕೆಟ್‌ಗಳನ್ನು ಎತ್ತುವರು ಮತ್ತು ಬಹುಮಾನ ವಿನಿಯೋಗವನ್ನು ವಹಿಸುವರು.

ಆ ದಿನ ಮಾರಾಟ ಮಾಡಲಾದ ಮಾಮೂಲಿ ಪ್ರವೇಶ ಟಿಕೆಟ್‌ಗಳ ಮೇಲೆ ಬಹುಮಾನಗಳನ್ನು ಎತ್ತಲಾಗುವುದು

ಪ್ರವೇಶ ದರ ಒಂದು ರೂಪಾಯಿ ಮಾತ್ರ

ಬಹುಮಾನಗಳು

ಮೊದಲನೆ ಬಹುಮಾನ ರೂ. 500/- ಬೆಲೆ ಬಾಳುವ ರೇಡಿಯೋ
ಎರಡನೆ ಬಹುಮಾನ ರೂ. 300/- ಬೆಲೆ ಬಾಳುವ ಟ್ರಾನ್ಸಿಸ್ಟರ್ ರೇಡಿಯೋ
ಮೂರನೆ ಬಹುಮಾನ ರೂ. 250/- ಬೆಲೆ ಬಾಳುವ ಬೈಸಿಕಲ್
ನಾಲ್ಕನೆ ಬಹುಮಾನ ರೂ. 200/- ಬೆಲೆ ಬಾಳುವ ಪ್ರೆಷರ್ ಕುಕ್ಕರ್

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಲನಚಿತ್ರ ಉತ್ಸವ
ಉಪ ಸಮಿತಿ ಅಧ್ಯಕ್ಷರಿಂದ ಪ್ರಕಟಿಸಲ್ಪಟ್ಟಿದೆ

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಕ್ಕೆ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಅನೆ-ಹುಡುಗ

ಅಪೆರಾ. 13 10 72 ರಿಂದ
ಬಾಂಧವ್ಯ

ಪಾತ್ರ : ಅಶ್ವತ್, ಗಂಗಾಧರ್, ರಾಜೇಶ್, ಬಿ. ವಿ ರಾಧ, ಪಂಡರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ, ಕುಪ್ಪುರಾಜ್, ರಮೇಶ್, ಮಂಜುನಾಥ್

ಸಂಗೀತ – ರತ್ನಂ ನಿರ್ದೇಶನ : ರತ್ನಾಕರ-ಮಧು

ದಿನ 3 ಪ್ರದರ್ಶನಗಳು